ಒಲಿಂಪಿಕ್ ಕ್ರೀಡೆ ಕಳಪೆಯಾಗುತ್ತಿರುವುದು

367(648); ಡಾ॥ ಸುಧಾಕರ್.ಕೆ (ಚಿಕ್ಕಬಳ್ಳಾಪುರ)

ಅ) ಭಾರತ ಪ್ರಪಂಚದಲ್ಲಿ ಶಕ್ತಿಯುತ ರಾಷ್ಟ್ರವೆನಿಸಿಕೊಳ್ಳಲು ಕ್ರೀಡೆ ಸಹ ಬಹು ಮುಖ್ಯವಾಗಿರುವುದರಿಂದ, ಈ ನಿಟ್ಟಿನಲ್ಲಿ ಇಲಾಖೆಯು ಕ್ರೀಡಾಪಟುಗಳ ಶಕ್ತಿ ಹಾಗೂ ಯುಕ್ತಿಯನ್ನು ಬಲಪಡಿಸಲು ಸರ್ಕಾರ ಕೈಗೊಂಡ ಯೋಜನೆಗಳಾವುವು;

ಆ) ಈ ಬಗ್ಗೆ ಕೇಂದ್ರ ಹಾಗೂ ರಾಜ್ಯ ಕ್ರೀಡಾ ಇಲಾಖೆಯ ಸಹಯೋಗದೊಂದಿಗೆ ಕೆಲಸ ಮಾಡಲಾಗುತ್ತಿದೆಯೇ;

ಇ) ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಹಯೋಗದಲ್ಲಿ ಕ್ರೀಡಾಪಟುಗಳಿಗಾಗಿ ಮಹತ್ತರವಾದ ಯೋಜನೆಗಳನ್ನು ಹಮ್ಮಿಕೊಳ್ಳುವ ಕಾರ್ಯಕ್ರಮಗಳ ಬಗ್ಗೆ ಸರ್ಕಾರದ ದೃಢ ನಿಲುವೇನು?

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು.)

ಅ) ಭಾರತ ಪ್ರಪಂಚದಲ್ಲಿ ಶಕ್ತಿಯುತ ರಾಷ್ಟ್ರವೆನಿಸಿಕೊಳ್ಳಲು ಕ್ರೀಡೆ ಸಹ ಬಹು ಮುಖ್ಯವಾಗಿರುವುದರಿಂದ ಈ ನಿಟ್ಟಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ರಾಜ್ಯದಲ್ಲಿ 2 ರಾಜ್ಯಮಟ್ಟ ಕ್ರೀಡಾಶಾಲೆ (ಕೊಡಗಿನ ಕೂಡಿಗೆ ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನ ವಿದ್ಯಾನಗರದಲ್ಲಿ) 3 ಕ್ರೀಡಾ ನಿಲಯಗಳು ಬಿಜಾಪುರ, ಬೆಳಗಾವಿ ಮತ್ತು ದಾವಣಗೆರೆ (ಜಿಲ್ಲಾ ಕೇಂದ್ರ ಸ್ಥಾನದಲ್ಲಿ) 8ನೇ ತರಗತಿಯಿಂದ 10ನೇ ತರಗತಿಯ ಕ್ರೀಡಾಪಟುಗಳಿಗಾಗಿ ಹಾಗೂ ಪ್ರಥಮ ಪಿಯುಸಿ ಯಿಂದ ಅಂತಿಮ ವರ್ಷದ ಕ್ರೀಡಾಪಟುಗಳಿಗಾಗಿ ನಡೆಸಲಾಗುತ್ತಿದೆ.

ಬೆಂಗಳೂರು ಮತ್ತು ಮೈಸೂರಿನಲ್ಲಿ ಯುವಕರು ಹಾಗೂ ಮಹಿಳೆಯರಿಗಾಗಿ ಪ್ರಥಮ ಪಿಯುಸಿ ಯಿಂದ ಅಂತಿಮ ವರ್ಷದ ಪದವಿಯವರೆಗೆ ಹಿರಿಯರ ಕ್ರೀಡಾ ನಿಲಯವನ್ನು ನಡೆಸಲಾಗುತ್ತಿದೆ.

23 ಜಿಲ್ಲಾ ಕ್ರೀಡಾಶಾಲೆಗಳು, ರಾಮನಗರ, ಉತ್ತರ ಕನ್ನಡ, ಬೆಳಗಾವಿ, ಬಿಜಾಪುರ, ಚಿತ್ರದುರ್ಗ, ಚಾಮರಾಜನಗರ, ಧಾರವಾಡ, ಹಾವೇರಿ, ಮಂಗಳೂರು, ಕೊಪ್ಪಳ, ಮೈಸೂರು, ಶಿವಮೊಗ್ಗ, ಉಡುಪಿ, ಬಾಗಲಕೋಟೆ, ಬೀದರ್, ಚಿಕ್ಕಮಗಳೂರು, ದಾವಣಗೆರೆ, ಗದಗ, ಕೋಲಾರ, ಹಾಸನ ಮಂಡ್ಯ, ರಾಯಚೂರು ಹಾಗೂ ತುಮಕೂರು (ಜಿಲ್ಲಾ ಕೇಂದ್ರ ಸ್ಥಾನದಲ್ಲಿ) 5ನೇ ತರಗತಿಯಿಂದ 7ನೇ ತರಗತಿ ವಿದ್ಯಾರ್ಥಿಗಳಿಗಾಗಿ ನಡೆಸುತ್ತಿದೆ.

ಕ್ರೀಡಾಪಟುಗಳ ಶಕ್ತಿ ಹಾಗೂ ಯುಕ್ತಿಯನ್ನು ಬಲಪಡಿಸಲು ಕಿರಿಯ ಕ್ರೀಡಾಪಟುಗಳಿಗೆ ಒಬ್ಬರಿಗೆ ಪ್ರತಿದಿನ ₹ 150/– ದರದಂತೆ ಹಾಗೂ ಹಿರಿಯ ಕ್ರೀಡಾಪಟುಗಳಿಗೆ ಒಬ್ಬರಿಗೆ ಪ್ರತಿ ದಿನಕ್ಕೆ ₹ 175/–ರ ದರದಲ್ಲಿ ಪೌಷ್ಟಿಕಾಂಶವುಳ್ಳ ಆಹಾರವನ್ನು ನೀಡಲಾಗುತ್ತಿದೆ.

ಕ್ರೀಡೆಗಳಲ್ಲಿ ಉತ್ತೇಜನ ನೀಡಲು ಕ್ರೀಡಾಶಾಲೆ/ನಿಲಯಗಳಲ್ಲಿ ತರಬೇತಿ ಪಡೆಯುತ್ತಿರುವ ಕ್ರೀಡಾಪಟುಗಳ ಎಲ್ಲಾ ವೆಚ್ಚಗಳನ್ನು (ಸಮವಸ್ತ್ರ ಕ್ರೀಡೋಪಕರಣಗಳು, ಕ್ರೀಡಾಗಂಟು, ವೈದ್ಯಕೀಯ ವೆಚ್ಚ, ಊಟ ಮತ್ತು ವಸತಿ, ಪ್ರಯಾಣ ವೆಚ್ಚ, ಪಂದ್ಯಾಳಿಗಳಲ್ಲಿ ಭಾಗವಹಿಸುವುವಿಕೆ, ಇತ್ಯಾದಿ) ಗಳನ್ನು ಇಲಾಖೆಯಿಂದ ಭರಿಸಲಾಗುತ್ತಿದೆ. ಕ್ರೀಡಾಶಾಲೆ/ನಿಲಯದ ಕ್ರೀಡಾಪಟುಗಳು ರಾಷ್ಟ್ರ ಮತ್ತು ಅಂತರಾಷ್ಟ್ರಮಟ್ಟದ ಕ್ರೀಡಾ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಪದಕ ಪಡೆದವರಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಕೇಂದ್ರ ಪುರಸ್ಕೃತ ಯೋಜನೆಯ ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ (ಪೈಕಾ) ಯೋಜನೆಯಡಿ ಪ್ರತಿವರ್ಷ ಶೇ.10% ರಷ್ಟು ಗ್ರಾಮ ಹಾಗೂ ಬ್ಲಾಕ್ ಮಟ್ಟಗಳಲ್ಲಿ ಪೈಕಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್ ಮತ್ತು ಬ್ಲಾಕ್ ಪಂಚಾಯತ್ ಮಟ್ಟಗಳಲ್ಲಿ ಪೈಕಾ ಕೇಂದ್ರಗಳನ್ನು 2017–18ನೇ

ಸಾಲಿನೊಳಗಾಗಿ ಸ್ಥಾಪಿಸುವ ಗುರಿಯನ್ನು ಹೊಂದಲಾಗಿದೆ. ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಕೇಂದ್ರವೊಂದಕ್ಕೆ ಶೆ.75% ಕೇಂದ್ರ ಸರ್ಕಾರದಿಂದ ಹಾಗೂ ರಾಜ್ಯ ಸರ್ಕಾರದಿಂದ ಶೆ.25% ಮೀಸಲಿರಿಸಲಾಗುತ್ತದೆ.

ಪ್ರತಿ ವರ್ಷ ಪೈಕಾ ಮಹಿಳಾ ಕ್ರೀಡಾಕೂಟ ಹಾಗೂ ಕೆಳಹಂತದ ಗ್ರಾಮೀಣ ಕ್ರೀಡಾಕೂಟವನ್ನು ಸಂಘಟಿಸಲು ಕೇಂದ್ರ ಸರ್ಕಾರವು ಸಂಪೂರ್ಣವಾಗಿ ಶೇ.100% ರಷ್ಟು ಅನುದಾನವನ್ನು ನೀಡಲಾಗುವುದು.

ಯುವನೀತಿ ಅಡಿ ಯುವ ಶಕ್ತಿ ಕೇಂದ್ರಗಳನ್ನು ಸ್ಥಾಪಿಸಿ ಯುವಜನರ ದೈಹಿಕ ಆರೋಗ್ಯಕ್ಕೆ ಪೂರಕವಾಗಿ ಜಿಮ್ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ. ಗ್ರಾಮೀಣ ಕುಸ್ತಿ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಸಲುವಾಗಿ ಗರಡಿ ಮನೆ ನಿರ್ಮಾಣ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ಉತ್ತೇಜನ ನೀಡಲು ಮಲ್ಟಿ ಜಿಮ್ ಕ್ರೀಡಾ ಸಾಮಾಗ್ರಿಗಳನ್ನು ಒದಗಿಸಲಾಗುತ್ತಿದೆ.

ರಾಜ್ಯದಲ್ಲಿ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಸಲುವಾಗಿ ಕ್ರೀಡಾ ವಿದ್ಯಾರ್ಥಿ ವೇತನ, ಸಿ.ಇ.ಟಿ ಪ್ರವೇಶ ಪರೀಕ್ಷೆಯಲ್ಲಿ ಕ್ರೀಡಾ ಮೀಸಲಾತಿ, ಶೈಕ್ಷಣಿಕ ಶುಲ್ಕ ಮರು ಪಾವತಿ, ಯುವ ಕ್ರೀಡಾ ಸಂಜೀವಿನಿ ವಿಮಾಯೋಜನೆ, ನಗದು ಪ್ರಶಸ್ತಿ, ಏಕಲವ್ಯ ಪ್ರಶಸ್ತಿ ಮುಂತಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತಿದೆ.

ಕ್ರೀಡಾ ಶ್ರೇಷ್ಠತಾ ಕೇಂದ್ರ (Academy for Sports Excellence) ಸ್ಥಾಪಿಸಿ ಅದರಡಿ ಕರ್ನಾಟಕದ ಕ್ರೀಡಾಪಟುಗಳಿಗೆ ಅಂತರ ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಲು, ವಿದೇಶದಲ್ಲಿ ಕ್ರೀಡಾ ತರಬೇತಿ ಪಡೆಯಲು ಧನ ಸಹಾಯ, ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಲು ದೈಹಿಕ ಸಾಮರ್ಥ್ಯ ಹೆಚ್ಚಿಸಲು ಪೌಷ್ಠಿಕ ಆಹಾರದ ಜೊತೆಗೆ ಅಗತ್ಯ ಕ್ರೀಡಾ ಉಪಕರಣಗಳಿಗೆ ಧನ ಸಹಾಯ ನೀಡಲಾಗುತ್ತಿದೆ.

ಕರ್ನಾಟಕ ರಾಜ್ಯಾದ್ಯಂತ ಕ್ರೀಡೆಗಳನ್ನು ಅಭಿವೃದ್ಧಿಪಡಿಸಲು ಮೂಲಭೂತ ಸೌಕರ್ಯಗಳನ್ನು ಜಿಲ್ಲಾಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಹಾಗೂ ಹೋಬಳಿ ಮಟ್ಟದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಜಿಲ್ಲಾ ಕ್ರೀಡಾಂಗಣಗಳು, ತಾಲ್ಲೂಕು ಕ್ರೀಡಾಂಗಣಗಳು ಇದರಲ್ಲಿ ಒಳಾಂಗಣ ಕ್ರೀಡಾಂಗಣ, ಈಜುಕೊಳ, ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ಮತ್ತು ಸಿಂಥೆಟಿಕ್ ಹಾಕಿ ಟರ್ಫ್, ಕ್ರೀಡಾ ಹಾಸ್ಟಲ್ ಕಟ್ಟಡ ನಿರ್ಮಾಣ ಮತ್ತು ಇತರೆ ಕ್ರೀಡಾ ಅಂಕಣಗಳನ್ನು ನಿರ್ಮಿಸಲಾಗುತ್ತಿದೆ.

ಆ) ಹೌದು

ಇ) ಪೈಕಾ ಯೋಜನೆಯಡಿ ಪೈಕಾ ಮಹಿಳಾ ಪಂದ್ಯಾವಳಿಯನ್ನು ಜಿಲ್ಲಾ ಮಟ್ಟದಿಂದ ರಾಷ್ಟ್ರಮಟ್ಟದವರೆಗೆ ಹಾಗೂ ಕೆಳಹಂತದ ಗ್ರಾಮೀಣ ಕ್ರೀಡಾಕೂಟವನ್ನು ಬ್ಲಾಕ್, ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರಮಟ್ಟದವರೆಗೆ ನಡೆಸಲಾಗುತ್ತಿದ್ದು, ಇದರಲ್ಲಿ 16 ವಯೋಮಾನ ಮೀರದ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕ್ರೀಡಾಪಟುಗಳಿಗೆ ಮಾತ್ರ ಪ್ರೋತ್ಸಾಹ ನೀಡಲಾಗುತ್ತಿದೆ. ಪೈಕಾ ಪಂದ್ಯಾವಳಿಯಲ್ಲಿ ಅಥ್ಲೆಟಿಕ್, ಜಿಮ್ನಾಸ್ಟಿಕ್, ಈಜು, ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಆರ್ಚರಿ, ಉಸು, ಟೇಕ್ವಾಂಡೋ ವೈಟ್‌ಲಿಫ್ಟಿಂಗ್ ಸೈಕಲಿಂಗ್ ಬಾಕ್ಸಿಂಗ್, ಜುಡೋ, ಕುಸ್ತಿ, ಕಬ್ಬಡಿ, ಖೋಖೋ, ಹಾಕಿ, ಪುಟಬಾಲ್, ವಾಲಿಬಾಲ್ ಬ್ಯಾಸ್ಕೆಟ್‌ಬಾಲ್, ಹ್ಯಾಂಡ್‌ಬಾಲ್ ಕ್ರೀಡೆಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ.